ಓ ಎಸ್ 57/2011
ಪಿ ಡಬ್ಲ್ಯೂ-1 ವಸಂತ ಪೂಜಾರಿ

**ದಿನಾಂಕ 06.04.2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಎ ಎಂ ವಕೀಲರಿಂದ**

1. ನನ್ನ ತಂದೆ ವಿಟ್ಲ ಕಸಬಾ ಗ್ರಾಮದ ಸರ್ವೆ ನಂಬ್ರ 649/2 ಸಿ ಯಲ್ಲಿ 16 ಸೆಂಟ್ಸ್ ಮತ್ತು ಸರ್ವೆ ನಂಬ್ರ 651/1 ಎ2 11 ಯಲ್ಲಿ ಸೆಂಟ್ಸ್ ಜಾಗವಿದೆ ಎಂದರೆ ಸರಿ . ಸಾಕ್ಷಿಗೆ ಮಾನ್ಯ ತಹಾಶೀಲ್ದಾರರವರು ನೀಡಿದ ಭೂಪರಿವರ್ತನೆಯ ಆದೇಶದ ಹಿಂಬರವನ್ನು ಮತ್ತು ನಕಾಶೆಯನ್ನು ತೋರಿಸಿದ್ದು ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ನಿಪಿ-9 ಎಂದು ಗುರುತಿಸಲಾಯಿತು. ನಿಪಿ-6 ಮತ್ತು ನಿಪಿ-7 ರಂತೆ ನಮ್ಮ ಮತ್ತು ವಾದಿಯ ಜಮೀನು ಇದೆ ಎಂದರೆ ಸರಿ . ನ್ಯಾಯಾಲಯದ ಆಯುಕ್ತರು ಸ್ಥಳಕ್ಕೆ ಬಂದು ಅಳತೆ ಮಾಡುವಾಗ ನಾನು ಇದ್ದೆ . ವಾದಿಗೂ ಮೊದಲು ದಾವಾ ಸ್ವತ್ತಿನಲ್ಲಿ ಚಂದ್ರಶೇಖರ ಇದ್ದರು . ಸದರಿ ಚಂದ್ರಶೇಖರ ರವರಿಂದ ದಾವಾ ಸ್ವತ್ತನ್ನು ವಾದಿ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಾವು ಸುಮಾರು 40 ವರ್ಷದಿಂದ ನಮ್ಮ ಜಮೀನಿನಲ್ಲಿ ಇದ್ದೇವೆ . ದಾವಾ ಸ್ವತ್ತು ಮತ್ತು ನಮ್ಮ ಜಮೀನಿನ ನಡುವೆ ಸುಮಾರು 40 ವರ್ಷದಿಂದ ಒಂದು ಆಗಳು ಇದೆ . ದಾವಾ ಸ್ವತ್ತಿನಿಂದ ನಮ್ಮ ಅರ್ಧ ಭಾಗದ ಸ್ವತ್ತು ಮೂರು ಅಡಿ ತಗ್ಗಿನಲ್ಲಿ ಇದೆ . ನಮ್ಮ ಜಮೀನಿನ ಚಕ್ಕು ಬಂದಿ ಗೊತ್ತಿಲ್ಲ . ನಮ್ಮ ಜಮೀನಿನ ಪಕ್ಕಕೆ ದಾವಾ ಜಮೀನು ಇದೆ . ಪಶ್ಚಿಮದ ಗಡಿ ಬಿಟ್ಟು ಸುಮಾರು 4 ಅಡಿ ದೂರದಲ್ಲಿ ನಮ್ಮ ಹೊಸ ಮನೆ ಇದೆ . ನಮ್ಮ ಜಮೀನಿನ ಉತ್ತರಕ್ಕೆ ಉಕ್ಕುಡ ಅಲಾಂಗರು ರಸ್ತೆ ಇದೆ . ನಮ್ಮ ಜಮೀನಿನ ಪೂರ್ವದಲ್ಲಿ ನಮ್ಮ ಮನೆಗೆ ಬರುವ ರಸ್ತೆ ಇದೆ . ನಮ್ಮ ಹೊಸ ಮನೆಯಿಂದ ಉಕ್ಕುಡ ಅಲಾಂಗರು ರಸ್ತೆ ಸುಮಾರು 50 ಮೀಟರ್ ದೂರದಲ್ಲಿ ಇದೆ . ನಮ್ಮ ಹೊಸ ಮನೆಯಿಂದ ಪೂರ್ವದ ಗಡಿ ಸುಮಾರು 150 ಅಡಿ ಮತ್ತು ದಕ್ಷಿಣದ ಗಡಿ 50 ಅಡಿ ದೂರದಲ್ಲಿ ಇದೆ . ನಮ್ಮ ತಂದೆಗೆ ಮಂಜೂರಾದ ಜಮೀನಿನಲ್ಲಿ ಒಟ್ಟು 2 ಮನೆ ಇದೆ . ನಮ್ಮ ತಂದೆ ಮರಣ ಹೊಂದಿದ ನಂತರ ಈಘ್ ಸುಮಾರು 10-12 ವರ್ಷಗಳ ಹಿಂದೆ ನಮ್ಮ ನಡುವೆ ಪಾಲಾಗಿದೆ . ದಾವಾ ಸಲ್ಲಿಸುವ ಕಾಲಕ್ಕೆ ನಮ್ಮ ನಡುವೆ ಪಾಲಾಗಿತ್ತು . ನಮ್ಮ ಉತ್ತರದ ಗಡಿಯಲ್ಲಿ ಆಗಳು ಇದೆ . ದಾವಾ ಸ್ವತ್ತು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರು ಆಗಿದೆ ಎಂದರೆ ಸರಿ . ನನ್ನ ಅಣ್ಣ ಕೃಷಪ್ಪ ಹೊಸ ಮನೆ ಕಟ್ಟಿದ್ದಾರೆ . ಸದರಿ ಮನೆಯನ್ನು ಕಟ್ಟುವ ಪೂರ್ವದಲ್ಲಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇತ್ತು . ಮನೆ ಕಟ್ಟಲು ಪರವಾನಿಗೆ ಪಡೆದಿದ್ದಾರೆ . ಮನೆ ಕಟ್ಟಲು ಯಾವಾಗ ಪರವಾನಿಗೆ ಪಡೆದರು ಎಂದು ನನಗೆ ಗೊತ್ತಿಲ್ಲ . ದಾವಾ ಸಲ್ಲಿಸುವ ಒಂದು ವರ್ಷ ಪೂರ್ವದಲ್ಲಿ ನನ್ನ ಅಣ್ಣ ಮನೆ ಕಟ್ಟಲು ಪರವಾನಿಗೆ ಪಡೆದಿದ್ದರು . ನ್ಯಾಯಾಲಯದ ಆಯುಕ್ತರು ಸಲ್ಲಿಸಿದ ವರದಿಯಲ್ಲಿ ಏನಿದೆ ಎಂದು ತಿಳಿದಿದುಕೊಂಡಿಲ್ಲ . ಕಾರಣ ಗೊತ್ತಿಲ್ಲ . ಸದರಿ ವರದಿಯ ಬಗ್ಗೆ ಆಕ್ಷೇಪ ಸಲ್ಲಿಸಬೇಕೆಂದು ಹೇಳಿದ್ದು ನೆನಪಿಲ್ಲ . ನಮ್ಮ ಹೊಸ ಮನೆಯ ಹತ್ತಿರ ಸುಮಾರು 5 ಫೀಟು ಆಗಳು ಜರೀದಿದ್ದು

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಓ ಎಸ್ 57/2011
ಪಿ ಡಬ್ಲ್ಯೂ-1 ವಸಂತ ಪೂಜಾರಿ

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ಬಂಟ್ವಾಳ,**